(ಕರ್ನಾಟಕ ಸರ್ಕಾರ)

# ತಹಸೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ದೂರವಾಣಿ ಸಂಖ್ಯೆ:-08397-238 255 E Mail: tahhbhele@gmail.com Pin Code-583 212

====================================================================

ನಂ/ಕಂ/ಪಹಣಿ/ವಿವಾದ/01/2016.17; ದಿನಾಂಕ: 30.06.2016

| ವಾದಿ | ಪ್ರತಿವಾದಿ |
|---|---|
| ಉಳಿಗಾಯಿ ಕಡ್ಲಬಾಳಪ್ಪ<br>ತಂದೆ ಲೇಟ್ ಉಳಿಗಾಯಿ ಭರಮಪ್ಪ<br>ಕೇಶವರಾಯನಬಂಡಿ ಗ್ರಾಮ,<br>ಹಗರಿಬೊಮ್ಮನಹಳ್ಳಿ(ತಾ) | 1.ಮರಿಲಿಂಗಪ್ಪ ತಂದೆ ಲೇಟ್ ಹುಳಿಗಾಯಿ ಹನುಮಂತಪ್ಪ<br>ಕೇಶವರಾಯನಬಂಡಿ ಗ್ರಾಮ, ಹ.ಬೊ.ಹಳ್ಳಿ(ತಾ)<br>2.ಹುಳಿಗಾಯಿ ಸಣ್ಣಹನುಮಂತಪ್ಪ ತಂದೆ ಹನುಮಪ್ಪ<br>ಕೇಶವರಾಯನಬಂಡಿ ಗ್ರಾಮ, ಹ.ಬೊ.ಹಳ್ಳಿ(ತಾ) |

**ಉಪಸ್ಥಿತರು:ಕೆ.ಬಿ.ಆನಂದಪ್ಪನಾಯಕ್, ಕ.ಆ.ಸೇ**
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ. 169/ಬಿ/1 ವಿ: 0.19 ಎಕರೆ ಜಮೀನನ್ನು ಡಾ.ನಂ. ಹೆಚ್.ಬಿ.ಹೆಚ್.1.03993. 2015.16;ದಿನಾಂಕ:10.02.2016ರ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ. 169/ಬಿ/1 ವಿ: 0.19 ಎಕರೆ ಜಮೀನನ್ನು ವಾದಿಯು ಪಟ್ಟಾದಾರರಾದ 01ನೇ ಪ್ರತಿವಾದಿಯಿಂದ ಡಾ.ನಂ. ಹೆಚ್.ಬಿ.ಹೆಚ್. 1.03993.2015.16; ದಿನಾಂಕ:10.02.2016ರ ನೋಂದಾಯಿತ ಕ್ರಯ ಪತ್ರದ ಪ್ರಕಾರ ಕ್ರಯಕ್ಕೆ ಹೊಂದಿದ್ದು, ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆಗೆ ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02ನೇ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-52/2015-16; ದಿ: .04.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-21.05.16 ರಿಂದ ದಿ:-30.06.2016ರ ವರೆಗೆ ಕಾಲಾವಕಾಶ ನೀಡಿ ವಿಚಾರಣೆ ಮಾಡಲಾಯಿತು, ವಿಚಾರಣೆಗೆ ಉಭಯರು ಹಾಜರಾಗಿರುತ್ತಾರೆ. ವಿಚಾರಣೆ ಸಮಯದಲ್ಲಿ 02ನೇ ಪ್ರತಿವಾದಿ ಪರವಾಗಿ ಶ್ರೀ

ಹೆಚ್ ಮಹಾಲಿಂಗಪ್ಪ ವಕೀಲರು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣೆಗೆ ಹಾಜರಾದ ಜಮೀನಿನ ಪಟ್ಟಾದಾರರು ಹಾಗೂ ವಿಕ್ರಯದಾರರಾದ 01ನೇ ಪ್ರತಿವಾದಿಯು ರೂ 20/-ರ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ ಸಲ್ಲಿಸುತ್ತಾ, ವಿವಾದಿತ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜು ಮೂಲಕ ಕ್ರಯದಾರರಾದ ವಾದಿಗೆ ಕ್ರಯಕ್ಕೆ ನೀಡಿದ್ದು ಕ್ರಯ ವ್ಯವಹಾರದ ಮೊತ್ತ ಸಂಪೂರ್ಣವಾಗಿ ಮುಟ್ಟಿರುತ್ತದೆ, ನೊಂದಾಯಿತ ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು ತಿಳಿಸಿರುತ್ತಾರೆ. ವಿಕ್ರಯದಾರರ ಒಪ್ಪಿಗೆ ಪತ್ರದ ಪ್ರಕಾರ ಹಾಗೂ ಅವರ ಮೌಖಿಕ ಹೇಳಿಕೆಯಂತೆ ಪ್ರಶ್ನಿತ ಜಮೀನನ್ನು ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡುವಂತೆ ವಾದಿಯು ವಿನಂತಿಸಿರುತ್ತಾರೆ.

ಈ ಬಗ್ಗೆ ತಕರಾರು ಸಲ್ಲಿಸಿರುವ 02ನೇ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ,ವಿವಾದಿತ ಜಮೀನಿನಲ್ಲಿ ತನಗೂ ಭಾಗ ನೀಡಬೇಕೆಂದು ತಕರಾರು ಅರ್ಜಿ ಸಲ್ಲಿಸಲಾಗಿತ್ತು ಆದರೆ ಜಮೀನಿನ ಭಾಗದ ಬದಲಾಗಿ ಹಣವನ್ನು ಗ್ರಾಮದ ಹಿರಿಯರ ಸಮಕ್ಷಮ ಪಾವತಿಮಾಡಿರುತ್ತಾರೆ, ಆದ್ದರಿಂದ ವಿವಾಧಿತ ಜಮೀನನ್ನು ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು ಮೌಖಿಕ ಹೇಳಿಕೆ ನೀಡುತ್ತಾ, ಛಾಪಾ ಕಾಗದದಲ್ಲಿ ಒಪ್ಪಿಗೆ ಪ್ರಮಾಣ ಪತ್ರ ಹಾಜರುಪಡಿಸಿರುತ್ತಾರೆ.

ವಿಕ್ರಯದಾರರು ಮತ್ತು ತಕರಾರುದಾರರ ಮೌಖಿಕ ಹೇಳಿಕೆ ಮತ್ತು ಹಾಜರುಪಡಿಸಿದ ಒಪ್ಪಿಗೆ ಪ್ರಮಾಣ ಪತ್ರದನ್ವಯ, ವಿವಾದಿತ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡುವುದು ಸಮಂಜಸವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ. 169/ಬಿ/1 ವಿ: 0.19ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.03993.2015.16; ದಿನಾಂಕ:10.02.2016ರ ನೋಂದಾಯಿತ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ:30 .06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಗೆ,
ವಾದಿ/ಪ್ರತಿವಾದಿಗೆ

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಪ್ರತಿಯನ್ನು:
ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.
ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.